ಸೃಜನಿ

**SRUJANI: Indian Journal of Innovative Research and Development (SIJIRD)**
Volume-3 Issue 4, September-October 2024, Pp.60-67
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಸವಯುಗದ ವೈಚಾರಿಕ ಚಿಂತನೆಗಳು

**ಕನ್ಯಾಕುಮಾರಿ ಎಸ್**
ಸಹಾಯಕ ಪ್ರಾಧ್ಯಾಪಕರು, ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗ, ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ, ಎಂ.ಎಸ್.ಆರ್.ನಗರ, ಬೆಂಗಳೂರು.

***Abstract:***

*ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ವಿಚಾರಶೀಲ ಚಿಂತನೆಗಳು ಹಾಗೂ ಆರೋಗ್ಯಕರ ಸಮಾಜ –ಪರಿಸರ ಎಷ್ಟು ಮುಖ್ಯವೋ ಹಾಗೆಯೇ ಆ ಸಮಾಜದ ಅಭಿವೃದ್ಧಿಗೆ ಅಲ್ಲಿನ ಸಾಹಿತ್ಯ ಸಂಸ್ಕೃತಿಗಳ ಪ್ರಭಾವವು ಅಷ್ಟೇ ಮುಖ್ಯವಾಗಿರುತ್ತದೆ. ಸಂಸ್ಕೃತಿ ಎನ್ನುವುದು ಆಚಾರ, ವಿಚಾರ, ಮೌಲ್ಯಗಳನ್ನು ಒಳಗೊಂಡಿರುತ್ತದೆ, ಈ ಮೌಲ್ಯಗಳು ಜನಜೀವನದ ಅಂತರಂಗದ ಸಂಸ್ಕಾರಗಳನ್ನು ಅದಕ್ಕನುಗುಣವಾದ ಬಹಿರಂಗದ ನಡೆನುಡಿಗಳನ್ನು ರೂಪಿಸಿಕೊಳ್ಳುವುದರಲ್ಲಿ ಮುಖ್ಯವಾಗಿರುತ್ತವೆ. ಇದರಲ್ಲಿ ಸಾಹಿತ್ಯ ಮತ್ತು ಧರ್ಮದ ಸ್ಥಾನವು ಪ್ರಬಲವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಬದಲಾವಣೆ ಹಾಗೂ ಅರಿವು ಮೂಡಿಸುವ ದೃಷ್ಟಿಯಿಂದ ಬಸವಯುಗದಲ್ಲಿ ಕೈಗೊಂಡ ನಿಲುವು ಹಾಗೂ ವಚನ ಸಾಹಿತ್ಯದ ಮೂಲಕ ಸಾಮಾಜಿಕ ಮೌಢ್ಯಗಳನ್ನು ತೊಡೆದು ಹಾಕಲು ನಡೆಸಿರುವ ಕ್ರಾಂತಿ, ಸಂಘಟನೆಗಳು ಸರ್ವಕಾಲಕ್ಕೂ ಅನ್ವಯಿಸುವಂತಾಗಿವೆ. ಬಸವಣ್ಣನವರು ಸಂಘಟಿಸಿದ ಸಾಮಾಜಿಕ ಕ್ರಾಂತಿ ಮಾರ್ಗವು ಕ್ರಿಯಾತ್ಮಕವಾಗಿ ಮೂಡಿ, ಆಮೂಲಾಗ್ರ ಬದಲಾವಣೆಯನ್ನು ರೂಪಿಸಿರುವಂತದ್ದು. ಇದು ಭೌತಿಕ ಅಥವಾ ಮಾನವನ ಹೊರಗಿನ ಬದಲಾವಣೆ ಮಾತ್ರವಾಗಿರದೆ. ಆಂತರಿಕ ಬದಲಾವಣೆಗಳ ಮೂಲಕ ಸಮಗ್ರ ಪರಿವರ್ತನೆಯನ್ನು ತರುವಂತದ್ದು. ಈ ಮೂಲಕ ವೈಚಾರಿಕ ಪ್ರಜ್ಞೆ ಮೂಡಿಸಿ, ಮಾನವೀಯ ಮೌಲ್ಯಗಳನ್ನು ನೆಲೆಗೊಳಿಸಿ, ಜನಮಾನಸದಲ್ಲಿ ಹಾಸುಹೊಕ್ಕಾಗಿದ್ದ ಅಂಧಶ್ರದ್ಧೆಗಳನ್ನು ತೊಡೆದು ಹಾಕಲು ಕೈಗೊಂಡ ಪ್ರಯತ್ನಗಳು ಅಮೋಘವಾದವು. ಇಂತಹ ಸಂಘಟಿತ ಚಿಂತನೆಗಳ ಮೇಲೆ ಬೆಳಕು ಚೆಲ್ಲುವುದು ಈ ಲೇಖನದ ಮುಖ್ಯ ಆಶಯವಾಗಿದೆ.*

**Keywords:** *ಕನ್ನಡ ಸಾಹಿತ್ಯ, ಸಮಾನತೆ, ಬಸವಯುಗ, ಮಾನವೀಯ ಮೌಲ್ಯಗಳು, ವೈಚಾರಿಕ ಚಿಂತನೆಗಳು.*

## ಪೀಠಿಕೆ

ಶತಮಾನಗಳ ಕಾಲದ ಸಾಮಾಜಿಕ ಚಿಂತನೆ ಹಾಗು ಸಾಂಸ್ಕೃತಿಕ ಆದರ್ಶಗಳು ಅವಿರತವಾಗಿ ಹರಿಯುವ ಒಂದು ಮಾರ್ಗವಾಗಿ ಸಾಹಿತ್ಯವು ಕಾರ್ಯನಿರ್ವಹಿಸುತ್ತಿದ್ದು, ಸಮಾಜದ ಅಭಿವೃದ್ಧಿಯಲ್ಲಿ ಸಾಹಿತ್ಯ ನಿರ್ವಹಿಸಿರುವ ಪಾತ್ರ ಮಹತ್ವ ಪೂರ್ಣವಾದುದು.

ಅಂತೆಯೇ ಬಸವಯುಗವು 'ವಚನ' ಎನ್ನುವ ಸಾಹಿತ್ಯದ ಪ್ರಕಾರವೊಂದನ್ನು ಪರಿಚಯಿಸಿ, ಸರಳಭಾಷೆ ಮತ್ತು ಸ್ಪಷ್ಟ ರಚನೆಯಿಂದ ಅತ್ಯಂತ ಸಾಮಾನ್ಯರು ಸಾಹಿತ್ಯ ಸೃಷ್ಟಿಯಲ್ಲಿ ಪಾಲ್ಗೊಳ್ಳಬಹುದಾದ ಅವಕಾಶವನ್ನು ಒದಗಿಸಿಕೊಟ್ಟದ್ದು ಕನ್ನಡ ಸಾಹಿತ್ಯ ಇತಿಹಾಸದ ದಾಖಲೆಯಾಗಿದೆ. ಆಡುಭಾಷೆಯ

***Please cite this article as:*** ಕನ್ಯಾಕುಮಾರಿ, ಎಸ್ (2024). ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಸವಯುಗದ ವೈಚಾರಿಕ ಚಿಂತನೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 60–67

ಗಮ್ಯಪದಗಳನ್ನೇ ಬಳಸಿ, ಅಭಿವ್ಯಕ್ತಿಸಿರುವ ವಚನಕಾರರು ಸಾಧಿಸಿರುವ ಪ್ರಬುದ್ಧತೆ, ಘನತೆ, ಕಲಾತ್ಮಕತೆ ಅತ್ಯಂತ ವಿಶಿಷ್ಟವಾದದ್ದು. ಈ ಯುಗದ ಸಾಹಿತ್ಯವು ನೀತಿ ತತ್ವಗಳ ಜೊತೆಗೆ ಸಮಾಜ ಮತ್ತು ಮಾನವೀಯತೆ, ಮಾನವ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಒತ್ತು ನೀಡಿ, ಸಮಾಜದ ಪ್ರಗತಿ ಹಾಗೂ ಜನಸಾಮಾನ್ಯರ ಏಳಿಗೆಗಾಗಿ ನಿರ್ವಹಿಸಿದ ಪಾತ್ರ ಗುರುತರವವಾದದ್ದು.

**ಬಸವಯುಗದ ವಚನ ಸಾಹಿತ್ಯದ ಪಾತ್ರ**

ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಬಸವಯುಗ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯ ಸಮತೆಯನ್ನು ಸಾಧಿಸಿದ ಒಂದು ಅದ್ವಿತೀಯವಾದ ಯುಗ, ಆ ಕಾಲದಲ್ಲಿ ಕಂಡರಿಯದಂತ ಪರಿವರ್ತನೆಗಳಾಗಿ ಸಾಮಾಜಿಕ ಮತ್ತು ಧಾರ್ಮಿಕ ಸಮತೆಯನ್ನು ಭೋಧಿಸಿದುದಲ್ಲದೆ ಸಾಧಿಸಿಯೂ ತೋರಿಸಿದ್ದು ವಚನ ಸಾಹಿತ್ಯದ ವೈಶಿಷ್ಟ್ಯತೆ, ಇಂತಹ ಅವಕಾಶ ಕರ್ನಾಟಕಕ್ಕೆ ತಂದು ಕೊಟ್ಟವರು ಬಸವಾದಿ ಶಿವಶರಣರು.

ವಚನಗಳು ಹಾಗೂ ವಚನಕಾರರ ಬಗೆಗಿನ ನಮ್ಮ ಗ್ರಹಿಕೆಗಳು ಬಹುಪಾಲು ಸಾಹಿತ್ಯಕವಾಗಿವೆ. ಆರಾಧಕ ನಿಲುವುಗಳಿಂದ ಪ್ರೇರಿತವಾಗಿವೆ. "ಭಕ್ತಿ ಮಾರ್ಗವನ್ನಾಗಿಸಿಕೊಂಡು ವೈಚಾರಿಕತೆಯನ್ನು ಹೊಂದಿ ಪ್ರತಿಭಟನೆ–ಪ್ರತಿಕ್ರಿಯೆಗಳು ವ್ಯಕ್ತಿ ಹಾಗೂ ಸಮಷ್ಠಿ ರೂಪದಲ್ಲಿ ಹೊರಬಂದವು, ಸಾಮಾಜಿಕ ಕಳಕಳಿ ಧ್ವನಿಸಿತು. ಅಸಮಾನತೆ– ಮೌಢ್ಯಗಳ ವಿರುದ್ಧ ಕ್ರಾಂತಿಯ ಕಹಳೆ ಮೊಳಗಿಸಿತು.[1] ಎಂಬ ವಿಚಾರಗಳನ್ನು ಕನ್ನಡ ಸಾಹಿತ್ಯ–ಸಂಸ್ಕೃತಿ ಕೋಶದಲ್ಲಿ ಹೇಳಲಾಗಿದೆ.

ವಚನ ಸಾಹಿತ್ಯವು ಹೊಸಯುಗಕ್ಕೆ ನಾಂದಿಯಾಯಿತು. ಕಾಯಕದ ಮಹತ್ವ, ಮೌಢ್ಯಗಳ ನಿರ್ಮೂಲನ ಮೊದಲಾದವು ಈ ಯುಗದ ಕ್ರಾಂತಿಕಾರಕ ಸಾಧನೆಗಳಾಗಿ ಹೊರಬಂದವು. ಆ ಸುಸಂದರ್ಭ ಕರ್ನಾಟಕ ಸಂಸ್ಕೃತಿಯ ಒಂದು ಮಹತ್ತರ ಘಟ್ಟವೇ ಸರಿ. ಶರಣರ ಪುಣ್ಯ ಕಾರ್ಯಗಳ ಫಲವಾಗಿ ರೂಪುಗೊಂಡಿದ್ದು ವಚನ ಸಾಹಿತ್ಯ. ಈ ವಚನಗಳದ್ದು ಬಹುಷಃ ಇನ್ನಾವ ಭಾರತೀಯ ಭಾಷೆಯ ಸಾಹಿತ್ಯದಲ್ಲೂ ಇಲ್ಲದ ಒಂದು ವಿಶಿಷ್ಟ ರೂಪ. ಬಸವಣ್ಣನವರು ಅನುಸರಿಸಿದ ಮಾರ್ಗದಲ್ಲಿ ವೈಚಾರಿಕತೆ, ಬೌದ್ಧಿಕತೆ, ವೈಜ್ಞಾನಿಕತೆಗಳು ನಾಸ್ತಿಕ ರೂಪದಲ್ಲಾಗಲಿ, ಸಾಮಾನ್ಯರಿಗೆ ಜಟಿಲವಾಗುವ ಶುದ್ಧಾಂಗ ಜ್ಞಾನರೂಪದಲ್ಲಾಗಲಿ ಅಭಿವ್ಯಕ್ತವಾಗಿರದೇ ಪ್ರತಿಯೊಬ್ಬರಿಗೂ ಸಾಧ್ಯವಾಗುವ ಸಹಜ ನುಡಿಯಲ್ಲಿ, ವಚನಗಳಲ್ಲಿ ಅಭಿವ್ಯಕ್ತವಾದವು. ಇದರ ಪ್ರತಿರೂಪವಾಗಿ ಏಕ ಕಾಲಕ್ಕೆ ಸಮಾಜೋ–ಧಾರ್ಮಿಕ ಚಳವಳಿ–ಸುಧಾರಣೆಗಳು ಸಂಭವಿತವಾದವು ಎನ್ನುವುದನ್ನು ಗುರುತಿಸಬಹುದು.

**ಅಧ್ಯಯನದ ಉದ್ದೇಶಗಳು**

- ಸಾಮಾಜಿಕ ಸಮಾನತೆ, ವ್ಯಕ್ತಿತ್ವ ವಿಕಸನ ಮತ್ತು ವೈಚಾರಿಕ ಚಿಂತನೆಗಳನ್ನು ವಿಶ್ಲೇಷಿಸುವುದು.
- ವಚನ ಸಾಹಿತ್ಯದ ಕಾಯಕತತ್ವ, ಕರ್ಮ ಸಿದ್ಧಾಂತಗಳನ್ನು ಅರ್ಥೈಸಿಕೊಳ್ಳುವುದು.
- ವಚನಗಳಲ್ಲಿ ಅಭಿವ್ಯಕ್ತಿಯಾಗಿರುವ ಮೌಢ್ಯಗಳನ್ನು ವಿರೋಧಿಸಿರುವ ಮತ್ತು ಜೀವನ ಮೌಲ್ಯಗಳಿಗೆ ಮಹತ್ವ ನೀಡಿರುವ ಅಂಶಗಳನ್ನು ಗುರುತಿಸುವುದು.

**ಸಮಾನತೆಯ ತತ್ವ ಹಾಗೂ ವ್ಯಕ್ತಿತ್ವ ವಿಕಸನ ಗೊಳಿಸುವ ಚಿಂತನೆಗಳು**

ಕರ್ನಾಟಕದಲ್ಲಿ ನಡೆದ ಹನ್ನೆರಡನೆಯ ಶತಮಾನದ ಶರಣ ಚಳವಳಿ ಸಮಾನತೆ ಮತ್ತು ಮಾನವತೆಯನ್ನು ಸಾರಿದ ಒಂದು ಐತಿಹಾಸಿಕ ಘಟನೆ. ವಚನ ಚಳವಳಿಯ ಭಾಗವಾಗಿ ರೂಪುಗೊಂಡ ವಚನ ಸಾಹಿತ್ಯ ಇಂದಿಗೂ ಅತ್ಯಂತ ಪ್ರಸ್ತುತ. ಸಾಮಾಜಿಕ ಅಸಮಾನತೆ ಗೊಡ್ಡು

1. ನಿಂಗಣ್ಣ, ಜಿ.ಸಿ. (2010). *ಕನ್ನಡ ಸಾಹಿತ್ಯ–ಸಂಸ್ಕೃತಿ ಕೋಶ.* ಪುಟ. 179.

ಸಂಪ್ರದಾಯಕ್ಕೆ ಪ್ರತಿಕ್ರಿಯೆಯಾಗಿ ಬಂದ ವಚನ ಸಾಹಿತ್ಯ ಉಂಟು ಮಾಡಿದ ಅರಿವು ಸಾರ್ವಕಾಲಿಕವಾದದ್ದು.

ವಚನ ಸಾಹಿತ್ಯದ ಬಸವ ಯುಗವು ಜಾತಿ, ಧರ್ಮ, ವರ್ಣಾಶ್ರಮ, ಅಸಮಾನತೆಯ ವಿರುದ್ಧ ಸಿಡಿದೆದ್ದು ಮಾನವ ಜಾತಿ ಒಂದೇ ಎಂದು ಸಾರಿದ್ದಲ್ಲದೆ ಅದನ್ನು ನಿಜಜೀವನದಲ್ಲಿಯೂ ಕಾರ್ಯರೂಪಕ್ಕೆ ತಂದಿತು. ವರ್ಣವ್ಯವಸ್ಥೆ ಸೃಷ್ಟಿಸಿದ್ದ ಅಂತರ, ತರತಮ, ಭೇದ–ವಿಷಮತೆಗಳನ್ನು ತೊಡೆದು ಹಾಕಿ, ಹುಟ್ಟಿನ ಕಾರಣದಿಂದ ಯಾರೂ ಮೇಲಲ್ಲ, ಯಾರೂ ಕೀಳಲ್ಲವೆಂದು ಎರಡು ವಿರುದ್ಧ ನೆಲೆಗಳನ್ನು ಪ್ರಶ್ನೆಗೊಳಪಡಿಸಿ, ಶರಣತ್ವದ ಸಮತಲದಲ್ಲಿ ಜನರನ್ನು ಐಕ್ಯಗೊಳಿಸುವಂತ ಸಮಾನತೆಯ ತತ್ವವನ್ನು ನೆಲೆಗೊಳಿಸಿದ್ದು ಬಸವಯುಗದಲ್ಲಾದ ಮಹತ್ವಪೂರ್ಣ ಸಾಮಾಜಿಕ ಪರಿವರ್ತನೆಯಾಗಿದೆ.

ಬಸವಣ್ಣನವರು ರೂಪಿಸಲು ಹೊರಟ ಸಾಮಾಜಿಕ ವ್ಯವಸ್ಥೆಯಲ್ಲಿ ಕುಲ–ಜಾತಿ–ವೃತ್ತಿ–ಲಿಂಗಭೇಧಗಳೆಲ್ಲದರ ಮಾನದಂಡಗಳಿದು, ಗುಣ, ಯೋಗ್ಯತೆ, ಶೀಲತೆಗಳ ನೈತಿಕತೆಯ, ಸಮಾನತೆಯ ತತ್ವಗಳು ರೂಪಗೊಂಡಿದ್ದವು. ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾಗಿರುವ ಮುಖ್ಯ ಆಶಯವೆಂದರೆ ಸಾಮಾಜಿಕ ಆರ್ಥಿಕ ಸಮಾನತೆಯನ್ನು ಸಾಧಿಸುವುದು.

ವಚನಕಾರರು ನುಡಿಗಿಂತ ನಡೆಗೆ, ಬೋಧನೆಗಿಂತ ಸಾಧನೆಗೆ ಮಹತ್ವ ನೀಡಿದರು. ವರ್ಣ–ಜಾತಿ, ಲಿಂಗ–ವಯಸ್ಸುಗಳ ತಾರತಮ್ಯವಿಲ್ಲದೆ ಯೋಗ್ಯತೆಯೊಂದನ್ನೆ ಓರೆಗಲ್ಲಾಗಿಟ್ಟುಕೊಂಡು ಸಾಮಾಜಿಕ ಸಮಾನತೆಗಾಗಿ ಹೋರಾಟ ಮಾಡಿದವರು ವಚನಕಾರರು. ಬಹುಶಃ ಮೊಟ್ಟಮೊದಲ ಬಾರಿಗೆ ಸಮಾಜದಲ್ಲಿ ಇಂತಹ ಹೋರಾಟ ಸಾಧ್ಯವಾಗಿದ್ದು ವಚನಕಾರರಿಂದ. ಜಾತಿಕುಲದ ಮೌಢ್ಯಗಳನ್ನು ಬಸವಣ್ಣ ತನ್ನ ವಚನದಲ್ಲಿ ಜಾತಿ ಬೇಧಗಳನ್ನು ಪ್ರಶ್ನೆಗಳಿಗೊಳಮಾಡಿದರು.

***"ಜಾತಿವಿಡಿದು ಸೂತಕವನರಸುವೆ,***
***ಜ್ಯೋತಿವಿಡಿದು ಕತ್ತಲೆಯನರಸುವೆ,***
***ಇದೇಕೋ ಮರುಳ ಮಾನವಾ? ಜಾತಿಯಲಿ ಅಧಿಕನೆಂಬ ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನು?"*** ಎನ್ನುತ್ತದೆ ವಚನ.

"ಅನೇಕರು ಜಾತಿ ಮತಗಳನ್ನಳಿದು ಬಸವಣ್ಣನವರ ಮುಂದಾಳುತನದಲ್ಲಿ, ಭೇದ ಭಾವವೆಣಿಸದೆ ತಮ್ಮ ನಿತ್ಯದ ಅನುಭವಗಳನ್ನು ವಚನಗಳಾಗಿ ಅಭಿವ್ಯಕ್ತಿಸಿದರು. ಇದರಿಂದ ವಿನೂತನ ಆಯಾಮ ಪ್ರಾಪ್ತವಾಗಿ ನವೀನ ಪಥದಲ್ಲಿ ಮುನ್ನಡೆಯುವಂತಾಯಿತು".[2] ಜಾತಿಮೌಢ್ಯಗಳನ್ನು ದೂರೀಕರಿಸಲು 'ಹೊಲಸು ತಿಂಬುವನೇ ಹೊಲೆಯ, ಕೊಲುವವನೇ ಮಾದಿಗ' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದರು. ಜಾತಿ ಎಂಬುದು ಅವರು ಮಾಡುವ ವೃತ್ತಿಯಿಂದ ಬಂದಿದೆಯೇ ಹೊರತು ಹುಟ್ಟಿನಿಂದ ಬಂದುದಲ್ಲ. ಮೇಲು ಕೀಳುಗಳೆಂಬ ತರತಮ ಭೇದ–ಭಾವಗಳೆಲ್ಲ ಕಂದಾಚಾರಗಳಿಂದಲೇ ನಮ್ಮನ್ನಾವರಿಸಿ ಕೊಂಡಿವೆಯೇ ಹೊರತು ಹುಟ್ಟಿನಿಂದಾದುದಲ್ಲ. ಎನ್ನುವ ವಿಚಾರಗಳನ್ನು ಜನರಿಗೆ ತಿಳಿಸಿ ಅವರ ಮನಃಪರಿವರ್ತಿಸುವ ಕಾರ್ಯವನ್ನು ಮಾಡಿದರು.

"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ;" ಎಂದು ಜಾತಿ ಮೌಢ್ಯವನ್ನು ಬಸವಣ್ಣನವರ ವಚನದಲ್ಲಿ ವಿಡಂಬಿಸಲಾಗಿದೆ. ಸಂಪ್ರದಾಯಗಳು ಸೃಷ್ಟಿಸಿದ್ದ ಸಾಮಾಜಿಕ ವಿಷಮತೆ, ವರ್ಗ ವೈಷಮ್ಯಗಳಂತಹ ನೂರಾರು ನಂಬಿಕೆಗಳು ಹಾಗು ಮೌಢ್ಯಗಳಿಂದ ತುಂಬಿ

---

[2] ಪೂಜಾರ, ವಿ.ಜಿ. (1992). *ವಚನ ಸಾಹಿತ್ಯ ಅಂದು ಇಂದು ಒಂದು ವಿವೇಚನೆ.* ಸದ್ಭಾವ ಸಂಪದ–ಸ್ಮರಣ ಸಂಚಿಕೆ ಪುಟ.86.

ಶೋಷಣೆಗೊಳಗಾಗಿದ್ದ ಸಮಾಜವನ್ನು ವಚನಕಾರರು ಪ್ರತಿರೋಧಿಸಿದರು. **"**ವಚನಕಾರರು ವರ್ಣವ್ಯವಸ್ಥೆಯನ್ನು ತಿರಸ್ಕರಿಸಿ, ಸಾಮಾಜಿಕ ಸಮಾನತೆಯನ್ನು ಸಾರಿ ಪ್ರತಿಯೊಬ್ಬರು ಸಾಧನೆಗೆ ಅರ್ಹರೆಂದು ಸಾಬೀತು ಮಾಡಿದರು. ಸಮಾಜದ ಎಲ್ಲಾ ಸ್ತರದವರಿಗೂ ತಮ್ಮ ನಿಲುವುಗಳನ್ನು ಅಭಿವ್ಯಕ್ತಿಗೊಳಿಸಲು ಈ ಕಾಲಘಟ್ಟದಲ್ಲಿ ಅವಕಾಶ ಮಾಡಿಕೊಡಲಾಯಿತು.**"**[3]

ಸಾಮಾಜಿಕ ಕ್ರಾಂತಿಗೂ ನಾಂದಿ ಹಾಡಿದ ಆ ಚಳವಳಿಯ ಉತ್ಪನ್ನವು ವಚನಗಳನ್ನು ಸೃಷ್ಟಿಸಿ, ಸಾಮಾಜಿಕ–ಧಾರ್ಮಿಕ ಸಮಾನತೆಯನ್ನು ಸಾರಿದ್ದಲ್ಲದೆ, ಅಂಧಕಾರದಲ್ಲಿದ್ದ ಸಮಾಜಕ್ಕೆ ಅರಿವಿನ ಬೆಳಗನ್ನು ತೋರಿತು. ಅಲ್ಲದೆ ಜನರಲ್ಲಿ ಆತ್ಮಸ್ಥೈರ್ಯ ತುಂಬುವಲ್ಲಿ ಮೊದಲಾಯಿತು.

> ***"ಕರಿ ಘನ, ಅಂಕುಶ ಕಿರಿದೆನ್ನಬಹುದೆ;***
> ***ಬಾರದಯ್ಯ, ಗಿರಿ ಘನ, ವಜ್ರ ಕಿರಿದೆನ್ನಬಹುದೆ;***
> ***ಬಾರದಯ್ಯ,ತಮಂದ ಘನ, ಜ್ಯೋತಿ***
> ***ಕಿರಿದೆನ್ನಬಹುದೆ; ಬಾರದಯ್ಯ,***
> ***ಕೂಡಲಸಂಗಮದೇವಾ;"***

ಎನ್ನುವ ವಚನದಲ್ಲಿ ಬಸವಣ್ಣನವರು ಬಲ ಮತ್ತು ದುರ್ಬಲ ಎಂದು ಭಾವಿಸಿರುವ ಕೆಲವು ವಸ್ತುಗಳಲ್ಲಿರುವ ಭೌತಿಕ ಶಕ್ತಿಗಳ ಬಗ್ಗೆ ಇರುವ ತಪ್ಪು ತಿಳುವಳಿಕೆಗಳನ್ನು ನಿದರ್ಶನವಾಗಿಸಿಕೊಂಡು ಮಾನವನಲ್ಲಿರುವ ಗುಣಗಳನ್ನು, ಶಕ್ತಿಯನ್ನು ಅದರೊಂದಿಗೆ ಸಮೀಕರಿಸಿ. ವ್ಯಕ್ತಿ ತನ್ನಲ್ಲಿರುವ ಆತ್ಮಸ್ಥೈರ್ಯದಿಂದ ಕ್ರಿಯಾತ್ಮಕವಾದ ಚಿಂತನೆಗಳನ್ನು ಹೊರತರಬೇಕೆಂಬುದನ್ನು ಕುರಿತು ಅರ್ಥೈಸುತ್ತಾ ಆನೆ ಮತ್ತು ಅಂಕುಶ, ಗಿರಿ ಮತ್ತು ವಜ್ರ, ಕತ್ತಲೆ ಮತ್ತು ಜ್ಯೋತಿ ಪ್ರತಿಮೆಗಳನ್ನು ಬಳಸಿಕೊಂಡು ನಿತ್ಯ ಕಾಣುವ ನಿದರ್ಶನಗಳ ಮೂಲಕ ವ್ಯಕ್ತಿಯಲ್ಲಿ ಆತ್ಮಸ್ಥೈರ್ಯ ತುಂಬುವ, ವ್ಯಕ್ತಿತ್ವ ವೈಶಾಲ್ಯಗೊಳಿಸಿಕೊಳ್ಳುವ ಭಾವವನ್ನು ಸಮೀಕರಿಸಿ ಹೇಳುತ್ತಾರೆ. ಹೀಗೆ ದಿನನಿತ್ಯದ ಘಟನೆಗಳ ಉದಾಹರಣೆಯೊಂದಿಗೆ ವಸ್ತು ಅಥವಾ ವ್ಯಕ್ತಿಯ ಹಿನ್ನೆಲೆ ಮತ್ತು ಭೌತಿಕ ತತ್ವವನ್ನು ವಚನಗಳಲ್ಲಿ ತಿಳಿಸಲಾಗಿದೆ. ಆನೆ ಗಾತ್ರದಲ್ಲಿ ದೊಡ್ಡದು ಮತ್ತು ಬಲಶಾಲಿ ಆದರೆ ಮಾವುತ ಅಂತ ಆನೆಯನ್ನು ಸಣ್ಣ ಅಂಕುಶದಿಂದ ಹಿಡಿದಿಟ್ಟುಕೊಳ್ಳಬಲ್ಲ, ಅದರಂತೆ ಪರ್ವತ ದೊಡ್ಡದಾಗಿದ್ದರೂ–ವಜ್ರದಿಂದ ಕೊರೆದು ನಾಶಮಾಡಬಹುದು. ಹಾಗೂ ಕತ್ತಲು ಘೋರವಾಗಿದ್ದರೂ ಸಣ್ಣ ಬೆಳಕಿನ ಕಿಡಿ ಅದನ್ನು ಸರಿಸಬಲ್ಲದು, ಅದೇರೀತಿ ವಿವೇಕ ಮತ್ತು ಚಿಂತನೆಗಳಿಂದ ಮನುಷ್ಯನ ತನ್ನ ದುರ್ಬಲತೆಯನ್ನು ನೀಗಿಸಿಕೊಳ್ಳಲು ಸಾಧ್ಯವೆಂಬುದನ್ನು ಸಾಂಕೇತಿಕವಾಗಿ ವಚನಗಳಲ್ಲಿ ತಿಳಿಸಿದ್ದಾರೆ. ಕೀಳಿರಿಮೆ ಸಲ್ಲದೆಂಬ, ಆತ್ಮಸ್ಥೈರ್ಯವನ್ನು ವೃದ್ಧಿಸಿಕೊಳ್ಳುವ ಸಂದೇಶ ನೀಡಿದ್ದಾರೆ.

ವ್ಯಕ್ತಿತ್ವ ವಿಕಸನಗೊಳಿಸುವ ನೆಲೆಯಲ್ಲಿ ಬಸವಣ್ಣನವರು ನಡೆದ ಮಾರ್ಗ ಭಿನ್ನರೂಪದ್ದಾಗಿತ್ತು, ಸಾರಿದ ಕ್ರಾಂತಿ ವೈಚಾರಿಕ ನೆಲೆಯದ್ದಾಗಿತ್ತು. **"**ಬಸವಣ್ಣನವರ ಕ್ರಾಂತಿ ಮಾರ್ಗವು ಜೀವ–ಜೀವರಲ್ಲಿ, ದೇವ–ಜೀವರಲ್ಲಿ ಇರುವ ಎಲ್ಲಾ ಭಿನ್ನಮಾರ್ಗಗಳನ್ನು ಇಲ್ಲಾವಾಗಿಸಿಕೊಂಡು, ಐಕ್ಯಭಾವದತ್ತ ನಡೆಯುವ ಮಾರ್ಗ. ಇದು ಲೌಕಿಕದ ಒಳಗೆ ಆದ್ಯಾತ್ಮವನ್ನು, ಆಧ್ಯಾತ್ಮದ ಒಳಗೆ ಲೌಕಿಕವನ್ನು ಅಂತರ್ಗತಗೊಳಿಸಿಕೊಂಡ ಸಮಾಜೋದ್ಧಾರ ಮತ್ತು ಆತ್ಮೋದ್ಧಾರಗಳನ್ನೊಳಗೊಂಡ ಅತ್ಯಂತ ಮಹತ್ವದ ಮಾರ್ಗ.**"** [4].

ಬಸವಣ್ಣನವರ ವಿಚಾರಗಳಲ್ಲಿದ್ದ ಬಲವಾದ ನಿಲುವು ನಡೆ–ನುಡಿಗಳಲ್ಲಿ ರೂಪಿತವಾಗಿದ್ದವು ಆದ್ದರಿಂದಲೇ ಬಸವಣ್ಣನವರದ್ದು ಶರಣಮಾರ್ಗ. ಶರಣಧರ್ಮ. ಇದು ಅತ್ಯಂತ ಅಮೂಲ್ಯ ವಿಚಾರಗಳನ್ನೊಳಗೊಂಡ ವೈಚಾರಿಕ ಧರ್ಮವಾಗಿತ್ತು. ನಿದರ್ಶನವಾಗಿ 'ಕಳಬೇಡ, ಕೊಲಬೇಡ' ಎನ್ನುವ

---

[3] ಅದೇ.

[4] ಲತಾ. (2011). *ಬಸವಣ್ಣನ ಕಲ್ಯಾಣ ಹುಡುಕುತ್ತಾ*. ಪುಟ. 9.

ವಚನದಲ್ಲಿ ಕಳ್ಳತನ ಕೊಲೆ, ಹುಸಿ, ಅಸಹ್ಯ ತನ್ನ ಬಣ್ಣನೆಗಳಂತಹ ಕೇಡಿನ ಕ್ರಿಯೆಗಳನ್ನು ಮಾಡದಿರುವುದೇ ಅಂತರಂಗ–ಬಹಿರಂಗ ಶುದ್ಧಿಯ ಮಾರ್ಗವೆಂಬುದನ್ನು ಏಕತೆಯನ್ನು ತನ್ನೊಳಗೆ ತನ್ನನ್ನು ಕಂಡುಕೊಳ್ಳುವ ಮಾರ್ಗ ಎಂಬುದನ್ನು ಹೇಳಿದರು.

ನುಡಿ ಸುಲಭ, ನಡೆ ಕಷ್ಟ ಎನ್ನುವುದನ್ನು ತಿಳಿಸಿ ಕೊಡಲು ಮರ್ತ್ಯಲೋಕ, ಕರ್ತಾರನ ಕಮ್ಮಟವಯ್ಯಾ ಎನ್ನುತ್ತಾರೆ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ ಎನ್ನುವ ಮೂಲಕ ಸಾಂಪ್ರದಾಯಿಕ ನಂಬಿಕೆಗಳನ್ನು ಒಡೆದು, ಮರ್ತ್ಯಲೋಕವನ್ನು ಸ್ವರ್ಗಗೊಳಿಸುವ ಆದರ್ಶ ಜೀವನ ಮಾರ್ಗವನ್ನು ಅವರ ವಿಚಾರಗಳಲ್ಲಿ ಸಾಧರಪಡಿಸಿದರು. ಅಂತರಂಗ, ಬಹಿರಂಗ ಏಕೀಕೃತಗೊಂಡು ನಡೆನುಡಿಗಳು ಶುದ್ಧ ಲೌಕಿಕ–ನೈತಿಕ ಮೌಲ್ಯಗಳಿಂದ ಕೂಡಿರಬೇಕೆನ್ನುವ ಆದರ್ಶಗಳು ಅವರ ನುಡಿಗಳಲ್ಲಿ ಪ್ರತಿಫಲಿಸಿದವು.

**ಕಾಯಕತತ್ವ ಮತ್ತು ಕರ್ಮಸಿದ್ಧಾಂತಗಳು**

ವಿಶ್ವಮಾನವತೆಯ ಸಂದೇಶವನ್ನು ಸಾರಿದ ಬಸವಣ್ಣ ವರ್ಣಾಶ್ರಮ ವ್ಯವಸ್ಥೆಯನ್ನು ಹೊಂದಿ, ಶ್ರೇಣೀಕೃತ ಸಮಾಜವನ್ನು ಪೋಷಿಸಿದ್ದ ಕರ್ಮಸಿದ್ಧಾಂತವನ್ನು ವಿರೋಧಿಸಿ, ಬದಲಿಗೆ ಕಾಯಕ ಸಿದ್ಧಾಂತವನ್ನು ಪರಿಚಯಿಸಿದರು. ಹುಟ್ಟಿನ ಆಧಾರದ ಮೇಲೆ ನಿಂತಿದ್ದ ಕುಲಕಸುಬು, ಜಾತಿ–ವರ್ಣ ಭೇದ ನಿಯಮಗಳನ್ನು ನಿರಾಕರಿಸಿ, ವ್ಯಕ್ತಿ ಯಾವುದೇ ವೃತ್ತಿಯನ್ನು ಜೀವನ ನಿರ್ವಹಣೆಗಾಗಿ ಆಯ್ದುಕೊಳ್ಳುವ ತತ್ವವನ್ನು ಅನುಕರಣೆಗೆ ತರಲಾಯಿತು.

ಈ ಹಿನ್ನೆಲೆಯಲ್ಲಿ ಜಾತಿಯಾಧಾರಿತ ಕಸುಬುಗಳನ್ನು ಗೌರವಿಸಿ, ವೃತ್ತಿಯ ಮೇಲು–ಕೀಳು ಶ್ರೇಣಿಕರಣವನ್ನು ನಿರಾಕರಿಸಿ, ದೈಹಿಕ ದುಡಿಮೆಗಳನ್ನು ಕಾಯಕ ನಿಷ್ಠೆಯಾಗಿ ಪವಿತ್ರೀಕರಿಸಿ, ತರತಮ ಏಣಿಕೆಯನ್ನು ಹೋಗಲಾಡಿಸಿ, ಗಳಿಕೆಯನ್ನು ದಾಸೋಹದ ಮೂಲಕ ಸರ್ವರಿಗೂ ಬಳಸುವ, ಸಂಪತ್ತಿನ ಅಸಂಗ್ರಹಕ ತತ್ವವನ್ನು ಆಚರಣೆಗೆ ತಂದು, ಸಮಾಜದ ಆರ್ಥಿಕ ಸಮತೋಲನ ಹಾಗೂ ವೃತ್ತಿ ಸಮತೋಲನ ಸಾಧಿಸುವ ಸಮಾನತೆಯ ತತ್ವಕ್ಕೆ ತಳಪಾಯ ಹಾಕಿದರು.

ಬಸವಣ್ಣನವರ ನೇತೃತ್ವದಲ್ಲಿ ನಡೆದ ಶಿವಶರಣರ ವಚನ ಚಳುವಳಿ ಆತ್ಮಶುದ್ಧಿ ಹಾಗೂ ಕಾಯಕದ ಮಹತ್ವವನ್ನು 'ಕಾಯಕವೇ ಕೈಲಾಸ' ವೆಂಬ ಸರಳ ವಿಚಾರದಿಂದ ಆರ್ಥಿಕ ಸಮಾನತೆಯ ತತ್ವವನ್ನು ಜಗತ್ತಿಗೆ ತಿಳಿಹೇಳಿದ್ದಲ್ಲದೆ ಅದನ್ನು ಕಾರ್ಯಗತಗೊಳಿಸಿತು.

ಈ ತತ್ವ ಸಿದ್ಧಾಂತ ವಚನ ಚಳುವಳಿಯ ರೂಪದಲ್ಲಿ ಸಮಾಜಕ್ಕೆ ಒಂದು ಹೊಸ ಆಯಾಮವನ್ನು ಸೃಷ್ಟಿಸಿತು. ಸಮಾಜದ ಯಾವುದೇ ಸ್ತರದಲ್ಲಿದ್ದರೂ ಯಾವುದೇ ಕಾಯಕ ಮಾಡುತ್ತಿದ್ದರೂ ತಮ್ಮ ಅನುಭವ ಜ್ಞಾನದಿಂದ ವಚನಗಳನ್ನು ರಚಿಸಿ ಅಭಿವ್ಯಕ್ತಪಡಿಸುವಂತ ಅವಕಾಶ ದೊರೆಯಿತು. ಆಧ್ಯಾತ್ಮಿಕ ಮಾರ್ಗದಲ್ಲಿ ತೊಡಗಿಸಿಕೊಂಡು ಸಾಧನೆ ಮಾಡಲು ಸಾಧ್ಯವಾಯಿತು. ಹಾಗೆಯೇ ಆತ್ಮ ಗೌರವವನ್ನು ಹೆಚ್ಚಿಸಿಕೊಳ್ಳಲು ತಮ್ಮ ಕಾಯಕಗಳ ಜೊತೆಗೆ ತಮ್ಮ ಹೆಸರನ್ನು ಸೇರಿಸಿಕೊಂಡು ವಚನಗಳನ್ನು ರಚಿಸಿದ್ದಲ್ಲದೆ, ಉಚ್ಚ–ನೀಚ ಭಾವನೆಗಳನ್ನು ತಳ್ಳಿ ಹಾಕಿ ಸಾಮಾಜಿಕ ಸಮಾನತೆಯನ್ನು ಸಾರಲಾಯಿತು. ಮಡಿವಾಳ ಮಾಚಯ್ಯ, ಸುಂಕದ ಬಂಕಣ್ಣ, ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ ಮೊದಲಾದವರೆಲ್ಲರೂ ಆಧ್ಯಾತ್ಮಿಕ ಸಾಧನೆ ಮತ್ತು ಚರ್ಚೆಯಲ್ಲಿ ಸಮವಾಗಿ ಭಾಗವಹಿಸಿದರು. ಜಾತಿ ಮೌಢ್ಯತೆಗಳನ್ನು ದೂರೀಕರಿಸಿ, ವಚನಸಾಹಿತ್ಯದಲ್ಲಿ ಸಾಮಾಜಿಕ ಸಮಾನತೆಯನ್ನು ಸಾರಿ, ಸಾಧನೆಗೆ ಪ್ರತಿಯೊಬ್ಬರು ಅರ್ಹರೆಂಬುದನ್ನು ಸಾಬೀತು ಪಡಿಸಿದರು. "ವಚನಕಾರರು ಸಂಪ್ರದಾಯವನ್ನು ಮತ್ತು ಪರಂಪರೆಯನ್ನು ಬದಿಗಿರಿಸಿ ಸ್ವಾನುಭವದ ವೈಭವಕ್ಕೆ

ಪ್ರಾಮುಖ್ಯತೆ ನೀಡಿರುವುದು, ಶರಣರ ವಚನಗಳಿಂದ ಅರ್ಥವಾಗುತ್ತದೆ."[5]

**ವಚನಗಳಲ್ಲಿ ಮೌಢ್ಯಗಳ ವಿಡಂಬನೆ ಹಾಗೂ ವೈಚಾರಿಕ ಚಿಂತನೆಗಳು**

ವಚನಕಾರರು ವೈಚಾರಿಕ ಚಿಂತನೆಗಳನ್ನು ಹುಟ್ಟು ಹಾಕುವುದರ ಪೂರ್ವಭಾವಿಯಾಗಿ ಮೌಢ್ಯಗಳನ್ನು ಟೀಕಿಸಿ, ವಿಡಂಬಿಸಿದರು. ಸಮಾಜದಲ್ಲಿರುವ ಮೌಢ್ಯತೆಗಳನ್ನು ಟೀಕೆ, ವಿಮರ್ಶೆಗಳ ರೂಪದಲ್ಲಿ ವಚನಗಳ ಮೂಲಕ ಎತ್ತಿ ತೋರಿಸುತ್ತಾರೆ. 'ನೀರ ಕಂಡಲ್ಲಿ ಮುಳುಗುವರಯ್ಯ, ಮರವ ಕಂಡಲ್ಲಿ ಸುತ್ತುವರಯ್ಯಾ; ಬತ್ತುವ ಜಲನೊಣಗುವ ಮರವ ಮೆಚ್ಚಿದವರು ನಿಮ್ಮನೆತ್ತ ಬಲ್ಲರೋ ಕೂಡಲ ಸಂಗಮದೇವಾ.! ಎಂಬ ವಚನದಲ್ಲಿ ಬಸವಣ್ಣನವರು ಅಂಧಶ್ರದ್ಧೆ, ಕಂದಾಚಾರಗಳು ಮೌಢ್ಯತೆಯ ಪ್ರತೀಕವಾಗಿವೆಯೆಂದು ಸಾರಿ ಹೇಳಿ ಇವುಗಳನ್ನು ತೀವ್ರ ವಿಮರ್ಶೆಗೆ ಒಳಪಡಿಸುತ್ತಾರೆ. ಬತ್ತುವ ಜಲ ಮತ್ತು ಒಣಗುವ ಮರವನ್ನು ಸುತ್ತುವ ಮೌಢ್ಯತೆಯನ್ನು ಖಂಡಿಸಿ. ಅದಕ್ಕೆ ಬದಲಾಗಿ ನದಿ–ಮರ–ಗಿಡಗಳನ್ನು ಸಂರಕ್ಷಿಸಿಕೊಳ್ಳಬೇಕೆಂಬ ತಿಳುವಳಿಕೆ ನೀಡಿ, ವಚನಗಳ ಮೂಲಕ ಜಾಗೃತಿ ಮೂಡಿಸಿದ್ದಾರೆ.

ವ್ಯಕ್ತಿ ಮತ್ತು ಸಮಾಜದ ಶುದ್ಧೀಕರಣವನ್ನು ಮುಖ್ಯ ಗುರಿಯಾಗಿಟ್ಟುಕೊಂಡಿದ್ದ ವಚನಕಾರರು ನಿಷ್ಠುರವಾದ ಮತ್ತು ತತ್ವ ಪ್ರತಿಪಾದನೆಗಳನ್ನು ನಿಲುವಾಗಿಸಿಕೊಂಡು ಸಮಾಜದಲ್ಲಿದ್ದ ಮೌಢ್ಯಗಳನ್ನು ಪ್ರತಿಹಂತದಲ್ಲೂ ವಿರೋಧಿಸಿದರು. ಶರಣರ ವಚನಗಳ ವಿಶೇಷ ಗುಣವೆಂದರೆ ಬದುಕಿನ ಮೌಲ್ಯಗಳಿಗೆ ಮಹತ್ವ ನೀಡುವುದು ಮತ್ತು ಮೌಢ್ಯಗಳನ್ನು ವಿರೋಧಿಸುವುದು. ಹುಟ್ಟಿನಿಂದಲೇ ನಿರ್ಧರಿತವಾಗುವ ವ್ಯಕ್ತಿಯ ಬದುಕು ಅಥವಾ ಭವಿಷ್ಯ ಸಮಾಜದಲ್ಲಿನ ಈ ವ್ಯವಸ್ಥೆ ಮತ್ತು ಮೌಢ್ಯತೆಗಳಿಂದಾಗಿ ವ್ಯಕ್ತಿ ಸ್ವತಂತ್ರವನ್ನು ಕಳೆದುಕೊಂಡು ಅಜ್ಞಾನ ಮತ್ತು ಅಂಧಕಾರದಲ್ಲಿರಬೇಕಾದಂತಹ ಪದ್ಧತಿಗಳ ವಿರುದ್ಧ ವಚನಕಾರರು ಧ್ವನಿ ಎತ್ತಿದರು. ವ್ಯಕ್ತಿಗೆ ಸಂಸ್ಕಾರಗಳು ಹುಟ್ಟಿನಿಂದ ಬರುವುದೆಂಬ ಕಂದಾಚಾರಗಳನ್ನು ಅಲ್ಲಗಳೆದು, ಅವಕಾಶ ಕೊಟ್ಟರೆ ಯಾವುದೇ ಜಾತಿಯಲ್ಲಿ ಹುಟ್ಟಿದ ವ್ಯಕ್ತಿಯಾಗಿದ್ದರೂ ಸಂಸ್ಕಾರವಂತ ಚೇತನವಾಗಿ ಅರಳಬಹುದು ಎಂಬುದನ್ನು ಸಾಧನೆಯಿಂದ ಕ್ರಿಯಾರೂಪದಲ್ಲಿ ತಂದು ಸ್ಪಷ್ಟಪಡಿಸಿದರು. ವ್ಯಕ್ತಿ ಯಾವ ಜಾತಿಯವನು ಎಂಬುದು ಮುಖ್ಯವಲ್ಲ, ಅವನ ಆಚಾರ ವಿಚಾರಗಳು ಮುಖ್ಯ ಎಂಬುದು ವಚನಕಾರರ ನಿಲುವಾಗಿತ್ತು. ಅತ್ಯಂತ ಕೆಳಸ್ತರದವರಲ್ಲೂ ಆತ್ಮಗೌರವ, ಬುದ್ಧಿಚಾತುರ್ಯ ಮೌಲ್ಯಗಳಿರುತ್ತವೆ ಎಂಬುದನ್ನು ನಿರೂಪಿಸಿದರು. ಇದಕ್ಕೆ ಚೆನ್ನಯ್ಯ, ಧೂಳಯ್ಯ, ಕಕ್ಕಯ್ಯ ಅವರುಗಳಗಳ ವಚನಗಳೇ ನಿದರ್ಶನ.

***ಅಪ್ಪನು ನಮ್ಮ ಮಾದಾರ ಚೆನ್ನಯ್ಯ; ಬೊಪ್ಪನು ನಮ್ಮ ಡೋಹರ ಕಕ್ಕಯ್ಯ!***

***ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ; ಎನ್ನನೇತಕ್ಕರಿಯ ಕೊಡಲಸಂಗಮದೇವಯ್ಯ!*** ಎನ್ನುತ್ತಾ ವಿಚಾರ ಕ್ರಾಂತಿಯನ್ನು ತಂದರು.

"ಸರ್ವಕಾಲೀನ ಆದರ್ಶಕ್ಕಿಂತ ಸಮಕಾಲೀನ ಮೌಲ್ಯಗಳನ್ನು ಪ್ರತಿಪಾಧಿಸುವಲ್ಲಿ ಸಾಹಿತ್ಯ ತನ್ನ ಜನತೆಗೆ ಹತ್ತಿರವಾಗುತ್ತದೆ." ಎನ್ನುವ ನುಡಿ ಜನಸಾಮಾನ್ಯರ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿರುವ ಸೂಕ್ಷ್ಮ ಸಮಸ್ಯೆಗಳ ಎಳೆಗಳನ್ನು ಮಾರ್ಮಿಕವಾಗಿ ತಿಳಿಸಿವೆ. ವಚನಕಾರರು ಸಮಾಜದಲ್ಲಿದ್ದ ಮೌಢ್ಯಗಳನ್ನು ವಿಡಂಬಿಸಿ. ವೈಚಾರಿಕ ಚಿಂತನೆಗಳನ್ನು ಹುಟ್ಟುಹಾಕಿದ್ದಲ್ಲದೆ, ಮೌಲ್ಯಗಳನ್ನು ಎತ್ತಿ ಹಿಡಿದರು.

ಸಮಕಾಲೀನ ವಿಚಾರಧಾರೆಯನ್ನು ವಚನಗಳಲ್ಲಿ ತಂದು ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿ, 'ಆಚಾರವೇ ಸ್ವರ್ಗ, ಅನಾಚಾರವೇ ನರಕ' 'ಮರ್ತ್ಯ ಲೋಕ, ದೇವಲೋಕ ಬೇರಿಲ್ಲ ಕಾಣಿರೋ; ಕಳಬೇಡ

[5] ವಿದ್ಯಾಶಂಕರ್. (2006) *ಬೆಳ್ಳಿ ಬೆಳಗು, ವಚನ ವಾಙ್ಮಯ ಸ್ವರೂಪ ಮತ್ತು ಉಗಮ.* ಪುಟ.57.

ಕೊಲಬೇಡ ಹುಸಿಯ ನುಡಿಯಲುಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದೆ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ; ಎಂಬ ಸರಳ ನೀತಿಗಳು ವಚನಗಳಲ್ಲಿ ಹರಿದು ಬಂದುವು. ಅಸತ್ಯ, ಅನಾಚಾರ, ಕಳ್ಳತನ, ಅಸೂಯೆ ದ್ವೇಷಗಳಂತ ವಿಷಮತೆಗಳಿಂದ ಹೊರಬಂದು ಶುದ್ಧಮನಸ್ಕರಾಗಿ ವಿಚಾರವಂತಿಕೆಯನ್ನು ರೂಢಿಸಿಕೋಳ್ಳಬೇಕೆಂಬ ಸಂದೇಶಗಳನ್ನು, ತರತಮ ಭಾವನೆಗಳಿಂದ ಹೊರಬಂದು ವಿಚಾರವಂತರಾಗಬೇಕೆಂಬ ದೃಷ್ಟಿಕೋನಗಳನ್ನು ವಚನಗಳಮೂಲಕ ನೀಡಿದರು. ಆಚಾರಗಳಿಗಿಂತ ವಿಚಾರಗಳಿಗೆ, ಧಾರ್ಮಿಕತೆಗಿಂತ ನೈತಿಕತೆಗೆ, ಆಡಂಬರಕ್ಕಿಂತ ಭಕ್ತಿಗೆ, ನಡೆ, ನುಡಿಗಳಿಗೆ ಮಹತ್ವ ನೀಡಲಾಯಿತು. "ಧಾರ್ಮಿಕ ಪ್ರಜ್ಞೆಯ ನೆಲೆಯಿಂದ ನೈತಿಕ ಪ್ರಜ್ಞೆಯ ನೆಲೆಗೆ ವಿವರಣೆಗಳನ್ನು ಪಲ್ಲಟಗೊಳಿಸಿ, ನೈತಿಕ ನಡವಳಿಕೆ ಮೂಲಕ ದೇವರನ್ನು ಸೇರಬಹುದು".[6] ಎಂಬ ಬಸವಣ್ಣನವರ ನುಡಿ–ನಂಬಿಕೆ ಅವರ ವಚನಗಳ ಜೊತೆಗೆ ಆಚರಣೆಗಳಲ್ಲಿ ಅಭಿವ್ಯಕ್ತವಾಯಿತು.

ದೈನಂದಿನ ಆಚರಣೆಗಳು ಜನರಲ್ಲಿದ್ದ ನಂಬಿಕೆಗಳು ಹಾಗೂ ಶುಭ–ಅಶುಭಗಳೆಂಬ ವಿಚಾರ ಕುರಿತು ಬಸವಣ್ಣನವರು ಇದೊಂದು ಮೌಢ್ಯವೆಂದು ಬದುಕಿನ ಕಾಲವನ್ನು ವಿಚಾರಶಕ್ತಿಯನ್ನು ವ್ಯರ್ಥಮಾಡಿಕೊಳ್ಳುವುದೆಂದು ಖಂಡಿಸಿದರು. ಶುಭ–ಅಶುಭವೆಂಬ ಪ್ರಬಲ ನಂಬಿಕೆಗಳನ್ನು ವಿರೋಧಿಸಿ, ಶಾಸ್ತ್ರಾದಿ ಅವಲಂಬನೆಗಳನ್ನೆಲ್ಲಾ ನಿರಾಕರಿಸಿ, ಶರಣರ ಭಕ್ತಿ, ಧೈರ್ಯ, ಸ್ವಾವಲಂಬನೆಗಳಂತಹ ವಿಚಾರಶಕ್ತಿಗಳನ್ನು ಪ್ರತಿಪಾದಿಸಿದ್ದಾರೆ.

ವಚನಕಾರರು ಸಂಪ್ರದಾಯಗಳಿಗಿಂತ ಅನುಭವ ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರು. ಆದ್ದರಿಂದಲೇ ವಚನ ಧರ್ಮವು ಯಾವುದೇ ವಿಧವಾದ ಪೂರ್ವಾಗ್ರಹಗಳಿಗೂ ತುತ್ತಾಗದೆ ಸರ್ವರಿಗೂ ಅನ್ವಯಿಸುವ ವಿಶ್ವಧರ್ಮವಾಗಿ ರೂಪುಗೊಂಡಿತು.

ಸಮಾನತೆಯ ಮುಕ್ತ ಚರ್ಚೆಗಳು ಸಮಾಜದಲ್ಲಿದ್ದ ವಿಷಮತೆ, ಮೌಢ್ಯಗಳ ವಿರುದ್ಧ ಸಾಮಾಜಿಕ ಮೌಲ್ಯಗಳನ್ನು ನಿರೂಪಿಸುವ ಸಮಕಾಲೀನ ಚಿಂತನೆಗಳು ರೂಪಗೊಂಡ ಆ ಕಾಲ, ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ನೀಡಿದ ಆ ಸಂದರ್ಭ ಅವಿಸ್ಮರಣೀಯವಾದದ್ದು. "ಸಮಾಜದಲ್ಲಿನ ಲೋಪದೋಷಗಳನ್ನು ಹಾಗೂ ಜಿಡ್ಡುಗಟ್ಟಿದ ಸಂಪ್ರದಾಯಗಳನ್ನು ವಿರೋಧಿಸಿ, ಮೂಢನಂಬಿಕೆಗಳಲ್ಲಿ ಮುಳುಗಿ ಹೋಗಿದ್ದ ಸಮಾಜವನ್ನು ಮೇಲೆತ್ತಲು ಶರಣರು/ವಚನಕಾರರು ಧರ್ಮದ ಪ್ರತಿಪಾದನೆಯ ಜೊತೆಗೆ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದು ಸಾಮಾಜೋ–ಧಾರ್ಮಿಕ ಚಳುವಳಿಗಳನ್ನು ಏಕಕಾಲಕ್ಕೆ ಸಾರಿದರು."[7]

ಶಿವಶರಣರ ವಚನಗಳು ಸಾಮಾಜಿಕ ಡೊಂಕುಗಳನ್ನು ತಿದ್ದುವಲ್ಲಿ ಸದಾ ಸ್ಫೂರ್ತಿದಾಯಕವಾಗಿವೆ. ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರಯ್ಯಾ, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ, ಎಂದು ಬಸವಣ್ಣ ಸಮಾಜದಲ್ಲಿದ್ದ ಮೌಢ್ಯವನ್ನು ವಿಡಂಬಿಸಿ, ಆ ಯುಗದ ಸಮಕಾಲೀನ ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಜನಮನವನ್ನು ವೈಚಾರಿಕ ಚಿಂತನೆಗೆ ಒಳಗು ಮಾಡಲು ಪ್ರಯತ್ನಿಸಿದರು. ಆ ಪ್ರಯತ್ನಗಳ ಫಲವಾಗಿ ನಂಬಿಕೆಗಳ ಜಿಜ್ಞಾಸೆ ಮತ್ತೊಮ್ಮೆ ಸಮಾಜದಲ್ಲಿ ಪ್ರಶ್ನೆಗೊಳಗಾದದ್ದುಂಟು. ತರ್ಕದ ಮೂಲಕ ಹೇತುವಿನ ಮೂಲಕ ಈ ಎಲ್ಲಾ ಮೌಢ್ಯಗಳು ಪ್ರಶ್ನೆಗೊಳಗಾದವು. "ಮೂಢನಂಬಿಕೆ ಗೊಡ್ಡು ವಿಚಾರಗಳಿಂದ ಪಾಚಿಗಟ್ಟಿದ್ದ ಸಮಾಜಕ್ಕೆ ಕ್ರಾಂತಿಯೆಂಬ ತೂಬೂ ತೋಡಿ ಹಳೆಯ

[6] ಜಾನ್‌ಪೀಟರ್ಸನ್. (2000). ಅನುಭಾವಿಗಳಕ್ರಾಂತಿ. (ಅನು, ಚಂದ್ರಶೇಖರ.ಟಿ.ಆರ್). ಪುಟ. 42

[7] ಕಲಬುರ್ಗಿ, ಎಂ.ಎಂ. (1987). *ವಚನ ಸಾಹಿತ್ಯ ಮತ್ತು ಜೀವನ ಮೌಲ್ಯಗಳು. ಕನ್ನಡ ನುಡಿ, ಮಾರ್ಗ–1.* ಪುಟ. 289.

ಸಂಪ್ರದಾಯಗಳೆಂಬ ನೀರನ್ನೆಲ್ಲಾ ಹೊರಹಾಕಿ ವೈಚಾರಿಕತೆಯ ಹೊಸ ನೀರನ್ನು ತುಂಬುವುದು ಸಮಾಜ ಸುಧಾರಣೆ ಲಕ್ಷಣ."[8] ಎನ್ನುವ ಶಿರೂರ ಚಿಂತನೆಯಂತೆ ಈ ಎಲ್ಲ ಲಕ್ಷಣಗಳನ್ನೊಳಗೊಂಡ ಸಾಮಾಜಿಕ ಕ್ರಾಂತಿ ಬಸವಯುಗದಲ್ಲಿ ಸ್ಥಿತಪ್ರಜ್ಞೆಯನ್ನು ಮೂಡಿಸಿತ್ತು. ವೈಚಾರಿಕ ಚಿಂತನೆಗಳಿಗೆ ಅನುವು ಮಾಡಿಕೊಟ್ಟಿತು ಎಂಬುದನ್ನು ಧೃಡಪಡಿಸುತ್ತದೆ.

**ಫಲಿತಗಳು**

ಹೊಸ ವಿಚಾರಗಳ ಮಥನದಿಂದ ಹಳೆಯ ನಂಬಿಕೆಗಳು ಕುಸಿಯುತ್ತವೆ. ಹೊಸ ದೃಷ್ಟಿಕೋನ ಮೂಡುತ್ತದೆ. ಎನ್ನುವ ನುಡಿಯಂತೆ ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಬಸವಯುಗದ ಚಿಂತನೆಗಳು ಪರಿಣಾಮಕಾರಿಯಾಗಿ ಮನಮಂಥನಕ್ಕೆ ಎಡೆಮಾಡಿಕೊಟ್ಟಿವೆ. ಬಸವ ಯುಗದ ಸಾಹಿತ್ಯ ಪರಂಪರೆಯು ಸಾಮಾಜಿಕ ಪರಿವರ್ತನೆಯನ್ನು ತಾತ್ವಿಕ ನೆಲೆಯಲ್ಲಿ ವಿವೇಚಿಸಿ, ಆಧುನಿಕ ಸಮಾಜ ನಿರ್ಮಾಣ ಕಾರ್ಯಕ್ಕೆ ಸಹಕಾರಿಯಾಗಿದೆ. ವಚನ ಸಾಹಿತ್ಯವು ಮಾನವೀಯ ಮೌಲ್ಯಗಳನ್ನೊಳಗೊಂಡ ಸುಸ್ಥಿರ ಸಮಾಜದ ಸ್ಥಾಪನೆಗೆ ಭದ್ರಬುನಾದಿಯನ್ನು ಹಾಕಿ. ಹುಟ್ಟಿ ಹಾಕಿದ ವೈಚಾರಿಕ ನಿಲುವುಗಳು ಪ್ರಸ್ತುತ ಸಮಾಜಕ್ಕೆ ಮಾದರಿಯಾಗಿವೆ ಎನ್ನುವುದು ಈ ಅಧ್ಯಯನದಲ್ಲಿ ಸ್ಪಷ್ಟವಾಗುತ್ತದೆ. ಸಾಮಾಜಿಕ ಜಾಗೃತಿಯನ್ನು ಮೂಢಿಸುವ ವ್ಯಕ್ತಿತ್ವ ವಿಕಸನದ ಬಸವಯುಗದ ಚಿಂತನೆಗಳು ವರ್ತಮಾನಕ್ಕೆ ಅತ್ಯಂತ ಪ್ರಸ್ತುತವೆಂಬುದು ಈ ಅಧ್ಯಯನದಿಂದ ಮನನವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಜಾನ್‌ಪೀಟರ್ಸನ್. (2000). ಅನುಭಾವಿಗಳ ಕ್ರಾಂತಿ. (ಅನು, ಚಂದ್ರಶೇಖರ.ಟಿ.ಆರ್). ವೀರಶೈವ ಅಧ್ಯಯನ ಕೇಂದ್ರ, ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥೆ.
- ಕಲಬುರ್ಗಿ, ಎಂ.ಎಂ. (1987). *ವಚನ ಸಾಹಿತ್ಯ ಮತ್ತು ಜೀವನ ಮೌಲ್ಯಗಳು. ಕನ್ನಡ ನುಡಿ, ಮಾರ್ಗ–1.* ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಲತಾ. (2011). *ಬಸವಣ್ಣನ ಕಲ್ಯಾಣ ಹುಡುಕುತ್ತಾ.* ಅಭಿನವ ಪ್ರಕಾಶನ.
- ನಾರಾಯಣ, ಪಿ.ವಿ. (2008). *ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ.* ವಸಂತ ಪ್ರಕಾಶನ.
- ನಿಂಗಣ್ಣ, ಚಿ.ಸಿ. (2010). *ಕನ್ನಡ ಸಾಹಿತ್ಯ–ಸಂಸ್ಕೃತಿ ಕೋಶ.* ಸಿದ್ದಲಿಂಗೇಶ್ವರ ಪ್ರಕಾಶನ.
- ಪೂಜಾರ, ವಿ.ಜಿ. (1992). *ವಚನ ಸಾಹಿತ್ಯ ಅಂದು ಇಂದು ಒಂದು ವಿವೇಚನೆ.* ಧಾರವಾಡ ಸದ್ಭಾವ ಸ್ಮರಣ ಸಂಚಿಕೆ.
- ಶಿರೂರ, ಬಿ.ವ್ಹಿ. (2006). *ಸಂಶೋಧನ ಚತುರ್ಮುಖ, ವಚನಕಾರರ ಸಮಗ್ರ ಕ್ರಾಂತಿ.* ವಿದ್ಯಾನಿಧಿ ಪ್ರಕಾಶನ.
- ತಿಪ್ಪೆರುದ್ರಸ್ವಾಮಿ.ಎಚ್. (1983). *ವಚನ ಸಾಹಿತ್ಯ ವೈಚಾರಿಕ ಅಧ್ಯಯನ.* ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ.
- ವಿದ್ಯಾಶಂಕರ್. (2006) *ಬೆಳ್ಳಿ ಬೆಳಗು, ವಚನ ವಾಙ್ಮಯ ಸ್ವರೂಪ* ಮತ್ತು *ಉಗಮ* ಪ್ರಿಯದರ್ಶಿನಿ ಪ್ರಕಾಶನ.


[8] ಶಿರೂರ, ಬಿ.ವ್ಹಿ. (2006). *ಸಂಶೋಧನ ಚತುರ್ಮುಖ, ವಚನಕಾರರ ಸಮಗ್ರ ಕ್ರಾಂತಿ.* ಪುಟ. 221.